<u>**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು**</u>

<u>**ಎಸ್.ಸಿ. ಕೇಸ್ ಸಂ:121/2019**</u>

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಮೇಟಗಳ್ಳಿ ಪೋಲೀಸ್ ಠಾಣೆಯ
ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ.

: ವಿರುದ್ಧ :

ಆರೋಪಿತರು ಹರೀಶ ಮತ್ತು ಇತರರು

<u>**ದೋಷಾರೋಪಣೆ**</u>

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ **ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್,** ನಾನು ಈ ಕೆಳಕಂಡ ಆರೋಪಿತರಾದ

1. ಹರೀಶ ಅಃ ಚಕ್ಕ ಬಿನ್ ಲಕ್ಷ್ಮಣ, 20 ವರ್ಷ. ವಾಸಃ ವಿಶ್ವಣ್ಣನ ಬಾಡಿಗೆ ಮನೆ, ಕಾವೇರಿ ನಗರ ಮುಖ್ಯ ರಸ್ತೆ, ಕಾವೇರಿ ನಗರ, ಬನ್ನಿಮಂಟಪ, ಮೈಸೂರು.
2. ಕೆ.ಎಸ್.ಭರತ್ ಕುಮಾರ್ ಅಃ ನಾಮ ಅಃ ಸ್ನೇಕ್ ಬಿನ್ ಚೆನ್ನಯ್ಯ ಕೆ., 29 ವರ್ಷ. ವಾಸಃ ನಂ.29/ಎ, ಮಾಡೆಲ್ ಹೌಸ್, ಕರುಣಾಪುರ, ಗಾಂಧಿನಗರ, ಎನ್.ಆರ್.ಮೊಹಲ್ಲಾ, ಮೈಸೂರು.
3. ಕೀರ್ತಿ ಅಃ ಗೂಳಿ ಬಿನ್ ಲೇಟ್ ವೀರಭದ್ರ , 24 ವರ್ಷ. ವಾಸಃ ನಂ.19/ಬಿ, ಕಾವೇರಿ ನಗರ ಮುಖ್ಯ ರಸ್ತೆ, ದಿನೇಶ್ ಸಿಮೆಂಟ್ ಅಂಗಡಿ ಹಿಂಭಾಗ, ಕಾವೇರಿ ನಗರ, ಬನ್ನಿಮಂಟಪ, ಮೈಸೂರು.
4. ಮಂಜ ಬಿನ್ ವರದರಾಜು, 28 ವರ್ಷ. ಚನ್ನರಾಯಪಟ್ಟಣ ನಗರ, ನಾಗಸಮುದ್ರ ರಸ್ತೆ, ಹಾಸನ ಜಿಲ್ಲೆ.
5. ಮಂಜುನಾಥ ಅಃ ಗುಂಡ ಬಿನ್ ಲೇಟ್

ರಾಜಕುಮಾರ, 25 ವರ್ಷ, ವಾಸಃ 3019, 3 ನೇ ಕ್ರಾಸ್, ಕೆನರಾ ಬ್ಯಾಂಕ್ ಹತ್ತಿರ, 2 ನೇ ಪೇಸ್, ವಿಜಯನಗರ 4 ನೇ ಹಂತ, ಮೈಸೂರು ನಗರ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿಃ 13.09.2018 ರಂದು ಸಂಜೆ 7.00 ಗಂಟೆ ಸಮಯಕ್ಕೆ, ಎಲ್ಲಾ ಆರೋಪಿಗಳಾದ ನೀವುಗಳು ಕಾವೇರಿನಗರದಲ್ಲಿ ಹಮ್ಮಿಕೊಂಡಿದ್ದ, ಗಣಪತಿ ವಿಸರ್ಜನಾ ಮೆರವಣಿಗೆಯು ಕಾವೇರಿನಗರದ ಮುಖ್ಯರಸ್ತೆಯಲ್ಲಿ ಹೋದ ನಂತರ, ಬನ್ನಿಮಂಟಪದ ಶ್ರೀ ಶಿವರಾತ್ರೇಶ್ವರ ನಗರದ 6 ನೇ ಕ್ರಾಸ್, ನಂ.961 ರಲ್ಲಿರುವ ದಿನೇಶ್ ಶಾಪಿ (ಸತ್ಯಪ್ಪನ ಅಂಗಡಿ) ಬಳಿ, ಚಾಸಾ-2 ರವರೊಂದಿಗೆ ಇರುವ ರಾಜಕೀಯ ವೈಮನಸ್ಸು ಮತ್ತು ಹಗೆತನವನ್ನು ಸಾಧಿಸಿಕೊಳ್ಳುವ ಏಕೋದ್ದೇಶದಿಂದ, ಜಗಳ ಮಾಡಲು ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಈ ಮೂಲಕ 1 ರಿಂದ 5 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 143 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು, ಎಲ್ಲಾ ಆರೋಪಿಗಳಾದ ನೀವು ಅಕ್ರಮ ಕೂಟ ಕಟ್ಟಿಕೊಂಡು, ದೊಂಬಿ ಮಾಡುವ ಏಕೋದ್ದೇಶದಿಂದ, ಮಾರಕಾಸ್ತ್ರಗಳಾದ ಲಾಂಗ್ ಮತ್ತು ಚಾಕುವನ್ನು ಹೊಂದಿದ್ದು, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 144 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು, ಎಲ್ಲಾ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು, ಮಾರಕಾಸ್ತ್ರಗಳಾದ ಲಾಂಗ್ ಮತ್ತು ಚಾಕುವನ್ನು ಹಿಡಿದು ದೊಂಬಿ ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 148 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು, ಎಲ್ಲಾ ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಏಕೋದ್ದೇಶದಿಂದ, ಚಾಸಾ–2 ಈ ಏರಿಯಾಕ್ಕೆ ಅಧ್ಯಕ್ಷನಂತೆ ಆಡುತ್ತಿದ್ದಾನೆ, ಅವನನ್ನು ಹೀಗೆ ಬಿಟ್ಟರೆ ನಮ್ಮನ್ನು ಬೈದು ಬೈದು ನಮ್ಮ ಮಾನ ಹರಾಜು ಹಾಕುತ್ತಾನೆ, ಅವನಿಗೆ ಒಂದು ಗತಿ ಕಾಣಿಸೋಣ ಎಂದು, ಎಲ್ಲರೂ ಚಾಸಾ–2 ವನ್ನು ಕೊಲೆ ಮಾಡುವ ಸಂಚು ರೂಪಿಸಿದ್ದು, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 201 ಸಹವಾಚಕ 149 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಐದನೆಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸಮಯದಂದು, ಎಲ್ಲಾ ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಏಕೋದ್ದೇಶದಿಂದ, ಆರೋಪಿ 5 ರವರ ಬಾಬ್ತು ಕೆಎ 55 ಎಂ 2723 ಕಾರಿನಲ್ಲಿ ಮಾರಾಕಾಯುಧಗಳಾದ ಲಾಂಗ್ ಮತ್ತು ಚಾಕುವನ್ನು ತಂದು 1 ನೇ ಆರೋಪಿ ಓಡಿಸುತ್ತಿದ್ದ ಆಟೋ ಕೆಎ 09 8839 ಒಳಗೆ ಹಾಕಿ, ರಾತ್ರಿ 8.10 ಗಂಟೆ ಸಮಯಕ್ಕೆ ಚಾಸಾ–2 ರವರ ಆಫೀಸ್ ಹತ್ತಿರ ಇರುವ ಬಸ್ ಸ್ಟ್ಯಾಂಡ್ ಬಳಿಗೆ, 1 ನೇ ಆರೋಪಿ ಆಟೋದಲ್ಲಿ ಹಾಗೂ 5 ನೇ ಆರೋಪಿತನ ಕಾರಿನಲ್ಲಿ ಬಂದು, ಚಾಸಾ–2 ರವರನ್ನು ಸುತ್ತುವರಿದು, ಅವರು ಮುಂದೆ ಹೋಗದಂತೆ ಅಕ್ರಮ ತಡೆಯುಂಟು ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ 149 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಆರನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು, ಎಲ್ಲಾ ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಏಕೋದ್ದೇಶದಿಂದ, ಚಾಸಾ–2 ರವರನ್ನು ಕುರಿತು ನಮಗೆ ಬುದ್ಧಿ ಹೇಳಲು ನೀನ್ಯಾವ ತೋಟದಪ್ಪ ಎಂದು ನಿಂದಿಸಿ, ಅವಮಾನ ಮಾಡಿ, ಆತನು ರವರು ಶಾಂತಿ ಭಂಗ ಉಂಟು ಮಾಡುವಂತೆ ಉದ್ರೇಕಿಸಿ, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ 149 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಏಳನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು, ಎಲ್ಲಾ ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಏಕೋದ್ದೇಶದಿಂದ, ಚಾಸಾ–2 ರವರನ್ನು ಸುತ್ತುವರಿದು ತಳ್ಳಾಡಿ, 3 ನೇ ಆರೋಪಿಯಾದ ನೀವು ಚಾಸಾ–2 ವಿಗೆ ಕೈಯಿಂದ ಕಪಾಳಕ್ಕೆ ಹೊಡೆದಿದ್ದು, 2 ಮತ್ತು 4 ನೇ ಆರೋಪಿತರಾದ ನೀವು ಕೈಗಳಿಂದ ಗುದ್ದಿ, ತಿವಿದು ಹಲ್ಲೆ ಮಾಡಿ, ಚಾಸಾ–2 ವಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ 149 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಂದು ಎಲ್ಲಾ ಆರೋಪಿತರಾದ ನೀವು ಅಕ್ರಮ ಕೂಟ ಕಟ್ಟಿಕೊಂಡು ಏಕೋದ್ದೇಶದಿಂದ 2 ನೇ ಆರೋಪಿತನಾದ ನೀನು ಚಾಸಾ–2 ರವರನ್ನು ಕುರಿತು ಇವನನ್ನು ಮಡಗುವುದು ಬೇಡ ಹೊಡಿರಿ ಎಂದು ಕೂಗಿಕೊಂಡಾಗ, ಚಾಸಾ–11 ರಿಂದ 15 ರವರ ಸಮಕ್ಷಮ, 5 ನೇ ಆರೋಪಿತನಾದ ನೀನು ಚಾಸಾ–2 ವನ್ನು ಕೊಲೆ ಮಾಡುವ ಉದ್ದೇಶದಿಂದ, ಚಾಕುವಿನಿಂದ ಆತನ ಬೆನ್ನಿಗೆ ಮಾರಣಾಂತಿಕ ಹಲ್ಲೆ ಮಾಡಿದ್ದು, 1 ನೇ ಆರೋಪಿ ಲಾಂಗ್ ನಿಂದ ಕುತ್ತಿಗೆ ಹಾಗೂ ಎಡ ಕೈಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿ, ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು ಭಾರತ ದಂಡ ಸಂಹಿತೆ ಕಲಂ 307 ಸಹವಾಚಕ 149 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್)**

ದಿಃ 13.01.2021

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಮೈಸೂರು.